ನೀಲಿ ಡ್ರೆಸ್, ಲೇಸ್‌ಗಳಿಂದ ಅಲಂಕಾರ ಮಾಡಿದ ಕಾಲರ್ ಮತ್ತು ಮುಂಗೈಪಟ್ಟಿ, ಈಗ ತಾನೇ ಅರಳಿರುವಂತಿರುವ ಕೃತಕ ಹೂವುಗಳ ಕೊರಳರೇಖೆ ಅಬ್ಬಾ! ಅಜ್ಜಿಯ ಅಲಂಕಾರ ಕಂಡು ಎಂಥ ತರುಣ ಹೆಂಗಸು ಕೂಡ ಅಸೂಯೆಪಡಬೇಕು. ಮಕ್ಕಳು ಅವಳನ್ನು ಎವೆಯಿಕ್ಕದೆ ನೋಡಿದರು. ಅದಕ್ಕೆ ಅಜ್ಜಿ ಕೊಟ್ಟ ಕಾರಣ ಇವರಿಗೆ ಭಯವನ್ನೂ ಆಶ್ಚರ್ಯವನ್ನೂ ತಂದಿತು. ಅಕಸ್ಮಾತ್ ಕಾರು ಅಪಘಾತವಾಗಿ ತಾವೆಲ್ಲ ಸತ್ತು ಹೋದರೆ ನೋಡಿದ ಮಂದಿ 'ಪಾಪ! ಈ ಸುಂದರ ಅಜ್ಜಿ ಎಷ್ಟೊಂದು ದೊಡ್ಡ ಕುಟುಂಬದಿಂದ ಬಂದಿರಬೇಕು. ಎಷ್ಟು ಶ್ರೀಮಂತಳಾಗಿದ್ದಿರಬಹುದು' ಎಂದು ಮರುಗುತ್ತಾರಂತೆ!

'ಹಾಂ, ಅಲ್ಲಿ ನೋಡ್ರಿ, ಓಹೋ! ಇದನ್ನ ಎಷ್ಟ ದಿನಾ ಆಗಿತ್ತು ನೋಡಿ!...' ಅಜ್ಜಿ ಮಕ್ಕಳಿಗೆ ರನ್ನಿಂಗ್ ಕಾಮೆಂಟ್ರಿ ಕೊಡತೊಡಗಿದಳು. ಮಕ್ಕಳು ಮಾತ್ರ ಅವಳ ಮಾತುಗಳನ್ನು ಕಿವಿಗೆ ಹಾಕಿಕೊಳ್ಳದೆ ಕಾಮಿಕ್ಸ್ ಪುಸ್ತಕಗಳಲ್ಲಿ ನಿರತರಾಗಿದ್ದರು. ಅವರ ತಾಯಿ ನಿದ್ದೆಗೆ ಶರಣಾಗಿದ್ದಳು. ಅಷ್ಟರಲ್ಲಿ ಜಾರ್ಜಿಯಾ ಎನ್ನುವ ಊರು ಬಂತೆಂದು ಕಾಣುತ್ತದೆ. ಮಗ ಜಾನ್ ವೆಸ್ಲೆ ಅಪ್ಪನಿಗೆ

